ಆ) Whether the Government is aware that the persons in charge of this (metis) are misusing their powers by allotting the rooms to private parties without registering the occupants name in the register thus causing losses to the government,

ಇ) Whether it is not a fact that these kind of illegal occupants are the main reason for the pathetic condition of the rooms and buildings,

ಈ) The action taken by the government to improve and keep the premises clean to promote tourism (details be furnished)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಆಯಾ ವರ್ಷದಲ್ಲಿ ಲಭ್ಯವಾಗುವ ಅನುದಾನಕ್ಕನುಗುಣವಾಗಿ ನಿರೀಕ್ಷಣಾ ಮಂದಿರ ಹಾಗೂ ಪ್ರವಾಸಿ ಮಂದಿರಗಳ ಕೊರಡಿಗಳನ್ನು ನಿರ್ವಹಣೆ ಮಾಡಲಾಗುತ್ತಿದೆ

367 (312) ಶ್ರೀ ಜಯಪ್ರಕಾಸ್ ಹೆಗ್ಡೆ ಕೆ (ಬಹ್ಮಾವರ) . ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅದಿರು ಸಾಗಾಣಿಕೆಯಿಂದ ರಾಜ್ಯ ಸರ್ಕಾರಕ್ಕೆ ಬಂದ ಆದಾಯ ಎಷ್ಟು,

ಆ) ಅದಿರು ಸಾಗಾಣಿಕೆಯಿಂದಾಗಿ ರಸ್ತೆ ಮತ್ತು ಸೇತುವೆಗಳಿಗೆ ಉಂಟಾದ ಹಾನಿಯಿಂದಾಗಿ ರಾಜ್ಯ ಸರ್ಕಾರಕ್ಕೆ ಆದ ನಷ್ಟ ಎಷ್ಟು, (ವಿವರ ನೀಡುವುದು),

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು)

ಅ) ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರಿನಿಂದ 2005–06ನೇ ಸಾಲಿನಲ್ಲಿ 8440 62 ಲಕ್ಷ ರೂ ರಾಜಧನ ಸಂಗ್ರಹವಾಗಿರುತ್ತದೆ

ಆ) ಅದಿರು ಸಾಗಾಣಿಕೆಯಿಂದಾಗಿ ರಸ್ತೆ ಮತ್ತು ಸೇತುವೆಗಳಿಗೆ ಆರ್ಥಿಕವಾಗಿ ಉಂಟಾಗಿರುವ ನಷ್ಟ ಲೋಕೋಪಯೋಗಿ ಇಲಾಖೆಯು ನೀಡಿದ ವರದಿಯಂತೆ ಕೆಳಕಂಡಂತಿರುತ್ತದೆ,

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಬೆಂಗಳೂರು (ದಕ್ಷಿಣ) ಇವರ ವರದಿಯಂತೆ, ದಕ್ಷಿಣವಲಯ ವ್ಯಾಪಿಯಲ್ಲಿ ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆ ಹಾಗೂ ಸೇತುವೆಗೆ ಆದ ಹಾನಿಯಿಂದ ಒಟ್ಟು ಸುಮಾರು 830 00 ಕೋಟಿ ರೂ ಗಳ ನಷ್ಟ ಸಂಭವಿಸುತ್ತಿರುತ್ತದೆ

ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡ (ಉತ್ತರ) ಧಾರವಾಡ ಇವರ ವರದಿಯಂತೆ, ಉತ್ತರವಲಯ ವ್ಯಾಪ್ತಿಯಲ್ಲಿ ರಾಜ್ಯ ಹೆದ್ದಾರಿ ಜಿಲ್ಲಾ ಮುಖ್ಯರಸ್ತೆ ಹಾಗೂ ಸೇತುವೆಗೆ ಆದ ಹಾನಿಯಿಂದ ಒಟ್ಟು ಸುಮಾರು 879 00 ಕೋಟಿ ರೂ ಗಳು ನಷ್ಟ ಸಂಭವಿಸಿರುತ್ತದೆ

ಇ) ಬಳ್ಳಾರಿ, ಚಿತ್ರದುರ್ಗ ಹಾಗು ತುಮಕೂರು ಜಿಲ್ಲೆಗಳಿಂದ ಹೆಚ್ಚುವ ಸಂಖ್ಯೆಗಳಲ್ಲಿ ಲಾರಿಗಳು ಮಂಗಳುರು, ಕಾರವಾರ ಹಾಗೂ ಗೋವಾಗಳಿಗೆ ಹೋಗುವುದರಿಂದ ಹಾಗೂ ಹಿಂದೆ ವಾಹನಗಳು ಕೆಪಾಸಿಟಿಗಿಂತ ಹೆಚ್ಚು ಕಬ್ಬಿಣದ ಅದಿರನ್ನು ತುಂಬಿ ಸಾಗಾಣಿಕೆ ಮಾಡುತ್ತಿದ್ದುರಿಂದ ರಸ್ತೆಗಳು ಹಾಳಾಗುತ್ತಿದ್ದವು

ರಸ್ತೆಗಳು ಹಾಳಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರು ಗಳು ಬಂದ ಮೇಲೆ ಸರ್ಕಾರ ವಿವಿಧ ರೀತಿಯಲ್ಲಿ ವಾಹನಗಳ ಕೆಪಾಸಿಟಿಗಿಂತ ಹೆಚ್ಚು ಭಾರ ತುಂಬಿ ಸಾಗಿಸುತ್ತಿರುವ ಲಾರಿಗಳನ್ನು ತಡೆಯಲು ಕೆಳಗಿನಂತೆ ಕ್ರಮ ತೆಗೆದು ಕೊಳ್ಳಲಾಗಿದೆ,

ಸರ್ಕಾರವು ರಾಜ್ಯಮಟ್ಟದಲ್ಲಿ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 16 11 2005ರಂದು ಟಾಸ್ಕ್ ಫೋರ್ಸ್ ರಚಿಸಿ ಆದೇಶ ಹೊರಡಿಸಲಾಗಿದೆ ಸದರಿ ಸಮಿತಿಗಳಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳಲ್ಲದೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಇಲಾಖೆ, ಸಾರಿಗೆ ಇಲಾಖೆ, ಅರಣ್ಯ ಇಲಾಖೆ ಹಾಗೂ ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ಇಲಾಖೆಯ ಅಧಿಕಾರಿಗಳು ಸದಸ್ಯರಾಗಿರುತ್ತಾರೆ

ಎಂ ಸಿ ಆರ್, 1960 ರ ನಿಯಮಗಳಲ್ಲಿ ಇರುವಂತೆ ಪ್ರತಿಯೊಂದು ಗಣಿ ಗುತ್ತಿಗೆಯಲ್ಲಿಯೂ ತೂಕದ ಯಂತ್ರ ಅಳವಡಿಸಲು ಹಾಗು ಗಣಿಗುತ್ತಿಗೆಯಿಂದ ಸದಿರು ತುಂಬಿ ಹೊರಬರುವ ಲಾರಿಗಳನ್ನು ಗಣಿಗುತ್ತಿಗೆ ಪ್ರದೇಶದಲ್ಲಿಯೇ ಸರಿಪಡಿಸಿಕೊಂಡು ಬರುವಂತೆ ಎಲ್ಲಾ ಗಣಿ ಗುತ್ತಿಗೆದಾರರಿಗೂ ಸೂಚನಾ ಪತ್ರ

ನೀಡಲಾಗಿದೆ ತೂಕದ ಯಂತ್ರಗಳನ್ನು ಅಳವಡಿಸದಿರುವ ಗಣಿಗುತ್ತಿಗೆಗಳಿಗೆ ಪರವಾನಿಗೆ ನೀಡದಿರಲು ಇಲಾಖೆಯ ಜಿಲ್ಲಾಮಟ್ಟದ ಕಛೇರಿಗಳಿಗೆ ತಿಳಿಸಲಾಗಿದೆ

ರಸ್ತೆಗಳಲ್ಲಿ ಲಾರಿಗಳನ್ನು ತಪಾಸಣೆ ಮಾಡಿ ಪರವಾನಿಗೆಗಿಂತ ಹೆಚ್ಚು ಅದಿರು ತುಂಬಿ ಬರುವ ಲಾರಿಗಳನ್ನು ತಡೆದು ಅವುಗಳಿಗೆ ದಂಡ ವಿಧಿಸುವುದು, ಅನ್ ಲೋಡ್ (ಕೆಳಗಿಳಿಸಿ) ಮಾಡಿಸುವುದು ಹಾಗೂ ಪೊಲೀಸ್ ಠಾಣೆಗಳಿಗೆ ದೂರು ಸಲ್ಲಿಸಲು ಮೇಲೆ ತಿಳಿಸಿರುವ ಎಲ್ಲ ಇಲಾಖೆಯ ಅಧಿಕಾರಿಗಳಿಗೆ ತಿಳಿಸಲಾಗಿದೆ

ಇಲಾಖೆಯ ತನಿಖಾ ಠಾಣೆಗಳನ್ನು ಬಲಪಡಿಸಲು ಹಾಗೂ ತನಿಖಾ ಠಾಣೆಗಳಲ್ಲಿ ಸರ್ಕಾರದ ತೂಕದ ಯಂತ್ರವನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ

ಕಬ್ಬಿಣದ ಅದಿರು ಹೆಚ್ಚು ಸಾಗಾಣಿಕೆಯಾಗುತ್ತಿರುವ ರಸ್ತೆಗಳಾದ ಬಳ್ಳಾರಿ, ತುಮಕೂರು ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಹೊಸ ತನಿಖಾ ಠಾಣೆಯನ್ನು ಪೊಲಿಸ್ ಇಲಾಖೆ, ಅರಣ್ಯ ಇಲಾಖೆ, ಸಾರಿಗೆ ಇಲಾಖೆ, ಪೊಲೀಸ್ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಗಳ ಸಿಬ್ಬಂದಿ ಸೇರಿದಂತೆ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಈಗಾಗಲೇ ಬಳ್ಳಾರಿ ಜಿಲ್ಲೆಯಲ್ಲಿ 5 ಹೊಸ ತನಿಖಾ ಠಾಣೆ ತುಮಕೂರಿನಲ್ಲಿ 1 ತನಿಖಾ ಠಾಣೆ ತೆರೆದಿದ್ದು, ಕಾರ್ಯನಿರ್ವಹಿಸುತ್ತಿವೆ

ಅಧಿಕ ಕಬ್ಬಿಣದ ಅದಿರು ಸಾಗಾಣಿಕೆಯನ್ನು ಶಾಶ್ವತವಾಗಿ ನಿರ್ಬಂಧಿಸುವ ಸಲುವಾಗಿ ದಿನಾಂಕ 11 10 2006ರಂದು ಅಪರ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು ಸಾರಿಗೆ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆ, ಪೊಲೀಸ್ ಇಲಾಖೆ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ರಾಜ್ಯ ಮಟ್ಟದ ಎರಡು ತನಿಖಾ ದಳ ರಚಿಸಿ ಹೆಚ್ಚು ಅದಿರನ್ನು ಸಾಗಾಣಿಕೆ ಮಾಡುತ್ತಿರುವ ಬಳ್ಳಾರಿ, ಮಂಗಳೂರು , ಕಾರವಾರ, ಗೋವಾ ರಸ್ತೆಗಳಲ್ಲಿ ಹಾಗೂ ಮತ್ತೊಂದು ಸಂಚಾರಿ ತನಿಖಾ ಠಾಣೆ, ಚಿಕ್ಕನಾಯಕನಹಳ್ಳಿ ಮತ್ತು ಹೊಸದುರ್ಗ ತಾಲ್ಲೂಕುಗಳಿಂದ ಮಂಗಳೂರು, ಕಾರವಾರ, ಗೋವಾ, ಚೆನ್ನೈಗೆ ಹೋಗುವ ರಸ್ತೆಗಳಲ್ಲಿ ಲಾರಿಗಳ ತನಿಖೆಯನ್ನು ಮಾಡಿ ಅಧಿಕ ಭಾರದ ಅದಿರನ್ನು ಇಳಿಸಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವಶಕ್ಕೆ ನೀಡುವುದು, ಅದನ್ನು ಇಲಾಖೆಯಿಂದ ಹರಾಜು ಮೂಲಕ ವಿಲೇವಾರಿ ಮಾಡುವುದು ಎಂಬುದಾಗಿ ತೀರ್ಮಾನ ತೆಗೆದುಕೊಳ್ಳಲಾಗಿದೆ ದಿನಾಂಕ 18 1 2007ರಂದು ಪ್ರಧಾನ ಕಾರ್ಯದರ್ಶಿ, ಗೃಹ ಇಲಾಖೆ ಮತ್ತು ದಿನಾಂಕ 20 1 2007 ರಂದು ಕಮೀಷನರ್, ಸಾರಿಗೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಇಲಾಖಾಧಿಕಾರಿಗಳ ಸಭೆಗಳನ್ನು ನಡೆಸಿ, ಮುಖ್ಯವಾಗಿ ಖಾಸಗಿ ಸಾಗಾಣಿಕೆಯಾಗುತ್ತಿರುವ ರಾಷ್ಟ್ರೀಯ ಮತ್ತು ರಾಜ್ಯದ

ಹೆದ್ದರಿಗಳಲ್ಲಿ ತನಿಖಾ ರಾಣೆಗಳನ್ನು ನಿರ್ಮಿಸಿ ಸಾರಿಗೆ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಪೊಲೀಸ್ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗಳು ಅಧಿಕ ಭಾರವಿರುವ ವಾಹನಗಳು ಬರುವಲ್ಲಿ ಕರಿಣ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಲಾಯಿತು ಈ ರಸ್ತೆಗಳಲ್ಲಿ ಬರುವ ಸೇತುವೆಗಳ ಮುಂದೆ ನಿಗದಿತ ಭಾರಕ್ಕಿಂತ ಅಧಿಕ ಭಾರವಿರುವ ವಾಹನಗಳು ಚಲಿಸದಂತೆ ನಾಮಫಲಕಗಳನ್ನು ನಿರ್ಮಿಸುವುದು ಇಂತಹ ರಸ್ತೆಗಳಲ್ಲಿ ಬರುವ ವಾಹನಗಳು ಮತ್ತು ಹೋಗುವ ವಾಹನಗಳಿಗೆ ರಸ್ತೆಯ ಎರಡು ಬದಿಯಲ್ಲೂ ಇಂತಹ ವಾಹನಗಳು ಚಲಿಸಲು ತಕ್ಕಂತಹ ರಸ್ತೆಗಳನ್ನು ನಿರ್ಮಿಸುವುದು, ರಸ್ತೆಗಳಲ್ಲಿ ಅಧಿಕ ಭಾರದ ಖನಿಜವನ್ನು ಅನ್‌ಲೋಡ್ ಮಾಡಿಸಲು ಅಲ್ಲಿಂದಲ್ಲಿ ಸ್ಟಾಕ್ ಯಾರ್ಡ್‌ಗಳನ್ನು ನಿರ್ಮಿಸುವುದು ಮುಂತಾದ ಯೋಜನೆಗಳನ್ನು ಕೈಗೊಂಡು ಅಧಿಕ ಭಾರವನ್ನು ನಿಯಂತ್ರಿಸಲು ತೀರ್ಮಾನಿಸಲಾಯಿತು

ಈ ಬಗ್ಗೆ ಸಾರ್ವಜನಿಕರಿಂದ ದೂರು ಸಂಗ್ರಹಿಸಿ, ತಕ್ಷಣ ಕ್ರಮ ತೆಗೆದುಕೊಳ್ಳಲು ಹೆಲ್ಪ್‌ಲೈನ್‌ಗಳನ್ನು ಕೇಂದ್ರ ಕಛೇರಿಯಲ್ಲಿ ಹಾಗೂ ಜಿಲ್ಲಾ ಕಛೇರಿಗಳಲ್ಲಿ ತೆರೆಯಲಾಗಿದೆ ಹಾಗೂ ರಸ್ತೆಗಳಲ್ಲಿ ಇಲಾಖೆಯ ತನಿಖಾ ದಳದಿಂದ ರಾತ್ರಿ ಪಹರೆಯನ್ನು ಮಾಡಲಾಗುತ್ತಿದೆ

ಹೆಚ್ಚು ಭಾರ ಹೊತ್ತು ಬರುವ ವಾಹನಗಳನ್ನು ತನಿಖಾ ರಾಣೆಗಳಲ್ಲಿ ತನಿಖೆ ಮಾಡಿ ಅಂತಹ ವಾಹನಗಳಿಗೆ ಅದಿರು ನೀಡಿದ ಗಣಿ ಮಾಲಿಕರಿಂದ ಖನಿಜದ ಬೆಲೆ ಮತ್ತು ರಾಜಧನ ಇವುಗಳನ್ನು ವಸೂಲಿ ಮಾಡಲು ಇಲಾಖಾ ಜಿಲ್ಲಾ ಕಛೇರಿಗಳಿಗೆ ತಿಳಿಸಲಾಗುತ್ತಿದ್ದು, ಮುಂದಿನ ಪರವಾನಿಗೆ ನೀಡುವ ಮೊದಲು ಈ ಹಣವನ್ನು ಗಣಿಗುತ್ತಿಗೆದಾರರಿಂದ ವಸೂಲಿ ಮಾಡಲಾಗುತ್ತಿದೆ ಇದರಿಂದ ಹೆಚ್ಚು ಅದಿರು ತುಂಬಿ ಬರುವ ವಾಹನಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ

368 (313) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬಹ್ಮಾವರ) ಮಾನ್ಯ ಸಹಕಾರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿರುವುದರಿಂದ ಪ್ರಾಮಾಣಿಕವಾಗಿ ಸಾಲ ಮತ್ತು ಬಡ್ಡಿಯನ್ನು ಮರುಪಾವತಿ ಮಾಡಿದ ರೈತರಿಗೆ ಮರುಪಾವತಿ ಮಾಡಿದ ಬಡ್ಡಿಯನ್ನು ಹಿಂದಿರುಗಿಸುವ ಅಥವಾ ಮುಂದಿನ ಸಾಲಕ್ಕೆ ಹೊಂದಾಣಿಕೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) .

ಅ) ಪ್ರಸ್ತಾವವು ಸರ್ಕಾರದ ಮುಂದಿರುವುದಿಲ್ಲ